ಓ ಎಸ್ ನಂ.89/2018

- -                ಓ ಎಸ್ ನಂ.89/2018

ಪಿ.ಡಬ್ಲ್ಯೂ :4

ದಿನಾಂಕ :05-11-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ

ನಾನು ನನ್ನ ಸಾಕ್ಷಿ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ಮಾಹಿತಿಗಳು ಸತ್ಯವಾಗಿರುತ್ತವೆ. ಅದರಲ್ಲಿರುವ ಎಲ್ಲಾ ಅಂಶಗಳನ್ನು ಅರ್ಥೈಸಿಕೊಂಡು ಅದಕ್ಕೆ ನಾನು ಸಹಿ ಹಾಕಿರುತ್ತೇನೆ.

ನಿಪಿ -13 ರಲ್ಲಿ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -13 (ಹೆಚ್ ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ಜಿ ಎನ್ ವಕೀಲರಿಂದ **8** ನೇ ಪ್ರತಿವಾದಿ ಪರ ಃ

ವಾದಿಯು ಹೇಗೆ ಪರಿಚಯ ಎಂದರ ಸಾಕ್ಷಿಯು ವಾದಿಯ ಅಣ್ಣ ಕೆ ಟಿ ನಾರಾಯಣಪ್ಪ ರವರು ಮಾಗಡಿಯಲ್ಲಿ ನೆಲೆಸಿದ್ದಾರೆ , ಅವರ ಮೂಲಕ ವಾದಿಯ ಪರಿಚಯವಾಗಿದೆ . ಯಾವಾ ರೀತಿ ಪರಿಚಯ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ವಾದಿಯ ಅಳಿಯ ಪದ್ಮನಾಭಯ್ಯ ರವರು ನನ್ನ ಕಕ್ಷಿದಾರರಾಗಿದ್ದಾರೆ , ಅವರ ಮೂಲಕ ವಾದಿಯು ಪರಿಚಯವಾಗಿದ್ದಾರೆ ಎಂದು ತಿಳಿಸಿದ್ದಾರೆ . ದಿಃ 07-04-2017 ರ ಒಂದು ವಾರದ ಹಿಂದೆ ವಾದಿಯ ಪರಿಚಯವಾಗಿತ್ತು . ವಾದಿಯು ನೇಯ್ಗೆ ಕೆಲಸ ಮಾಡುತ್ತಿದ್ದರು . ಅವರು ಕಲ್ಲೂರು ಗ್ರಾಮದಲ್ಲಿ ವಾಸಿಸುತ್ತಿದ್ದರು . ಕಲ್ಲೂರಿನಲ್ಲಿ ವಾದಿಯು ನೇಯ್ಗೆ ಕೆಲಸ ಮಾಡುತ್ತಿದ್ದರು ಎಂದು ಅವರ ಅಳಿಯ ನನಗೆ ಪರಿಚಯಿಸಿಕೊಟ್ಟಿರಲಿಲ್ಲ . ವಾದಿಯು ನನಗೆ ಪರಿಚಯವಾದಾಗ ಕಲ್ಲೂರಿನಲ್ಲಿ ವಾಸಿಸುತ್ತಿದ್ದರು . ದಾವಾ ಸ್ವತ್ತನ್ನು ನಾನು ವ್ಯಯಕ್ತಿಕವಾಗಿ ನೋಡಿದ್ದೇನೆ . ದಾವಾ ಸ್ವತ್ತು ಖಾಲಿ ನಿವೇಶನವಾಗಿದೆ .

ವಾದಿಯ ಅಣ್ಣ ಕೆ ಟಿ ನಾರಾಯಣಪ್ಪ ರವರು ಕ್ರಯದ ಮಾತುಕತೆಗೆಂದು ಎಲ್ಲರನ್ನು ನನ್ನ ಕಚೇರಿಗೆ ಕರೆಸಿದ್ದರು . 1 ರಿಂದ 7 ನೇ ಪ್ರತಿವಾದಿಗಳ ಆಧಾರ್ ಕಾರ್ಡ್ ಗಳನ್ನು ಪರಿಶೀಲಿಸಿಲ್ಲ , ಅವರು ಮೌಖಿಕವಾಗಿ ತಿಳಿಸಿದ ಆಧಾರದಲ್ಲಿ ಅವರ ವಿಳಾಸಗಳನ್ನು ನಮೂದಿಸಿದ್ದೇನೆ . ನೀವು ವಕೀಲರಾಗಿರುವ ಕಾರಣ ದಾಖಲೆಗಳನ್ನು ಪರಿಶೀಲಿಸಬೇಕಿತ್ತು ಎಂದರೆ ಸಾಕ್ಷಿಯು ದಾವಾ ಸ್ವತ್ತುಗಳನ್ನು ಪರಿಶೀಲಿಸಿದ್ದೇನೆ ಎಂದು ಉತ್ತರಿಸಿದ್ದಾರೆ . 1 ರಿಂದ 7 ನೇ ಪ್ರತಿವಾದಿಗಳು ಮಾಗಡಿಯಲ್ಲಿ ವಾಸಿಸುತ್ತಿರಲಿಲ್ಲ ಎಂದರೆ ಸಾಕ್ಷಿಯು 7 ನೇ ಪ್ರತಿವಾದಿಯ ಬಗ್ಗೆ ಗೊತ್ತಿಲ್ಲ , 1 ರಿಂದ 6 ನೇ ಪ್ರತಿವಾದಿಗಳು ಕಲ್ಲೂರು ಗ್ರಾಮದ ವಾಸಿಗಳು ಎಂದು ತಿಳಿಸಿದ್ದಾರೆ . ಕ್ರಯದ

ಕಾರಾರು ಮಾಡುವ ಮೊದಲು ದಾವಾ ಸ್ವತ್ತನ್ನು ನೋಡಿದ್ದೇನೆ ನಾನು ಅಲ್ಲಿಗೆ ಹೋದಾಗ ಕರಾರಿನ ಎಲ್ಲಾ ಪಕ್ಷಗಾರರು ಅಲ್ಲಿ ಹಾಜರಿದ್ದರು . ಯಾವ ದಿನಾಂಕದಂದು ದಾವಾ ಸ್ವತ್ತನ್ನು ನೋಡಲು ಹೋಗಿದ್ದೆ ಎಂದು ಹೇಳಲು ನೆನಪಾಗುತ್ತಿಲ್ಲ . ನಾನು ವಕೀಲರಾಗಿರುವ ಯಾವುದೇ ಸ್ವತ್ತನ್ನು ಪರಿಶೀಲಿಸಿ , ಅದರ ದಾಖಲೆಗಳನ್ನು ಪರಿಶೀಲಿಸಿ ಅದಕ್ಕೆ ಸಂಬಂಧಿಸಿದ ಮಾಲಿಕರ ಬಗ್ಗೆ ತಿಳಿದುಕೊಂಡು ಸ್ವತ್ತು ಇರುವ ತಾಲ್ಲೂಕಿನಲ್ಲಿಯೇ ದಾಖಲೆಗಳನ್ನು ನೋಂದಾಯಿಸಿಕೊಡಲು ನಮಗೆ ಅಧಿಕಾರವಿದೆ ಎಂದರೆ ಸರಿ . ಗುಬ್ಬಿ ತಾಲ್ಲೂಕಿನಲ್ಲಿಯೇ ಕ್ರಯದ ಕರಾರನ್ನು ನೋಂದಾಯಿಸಿ ಕೊಡಬಹುದಿತ್ತು ಎಂದರೆ ಸಾಕ್ಷಿಯು ಪಕ್ಷಗಾರರ ಕೋರಿಕೆಯ ಮೇರೆಗೆ ನನ್ನ ಕಚೇರಿಯಲ್ಲಿ ತಯಾರಿಸಿ ಕೊಟ್ಟಿದ್ದೇನೆ ಎಂದು ತಿಳಿಸಿದ್ದಾರೆ . ನಾನು ಕಲ್ಲೂರಿನ ದಾವಾ ಸ್ವತ್ತನ್ನು ನೋಡಲು ಹೋದಾಗ ಕಲ್ಲೂರಿನ ಮತ್ತೊಬ್ಬ ವ್ಯಕ್ತಿಗೆ ಸದರಿ ಸ್ವತ್ತಿನ ಸಂಬಂಧ ಕ್ರಯದ ಕರಾರು ಮಾಡಿಕೊಡಲಾಗಿರುವ ವಿಚಾರ ನನಗೆ ಯಾರೂ ಹೇಳಿಲ್ಲ. . 1 ರಿಂದ 7 ನೇ ಪ್ರತಿವಾದಿಗಳು 8 ನೇ ಪ್ರತಿವಾದಿಗೆ ದಾವಾ ಸ್ವತ್ತಿಗೆ ಸಂಬಂಧಿಸಿ ಕ್ರಯದ ಕರಾರು ಪತ್ರ ಬರೆದುಕೊಟ್ಟಿದ್ದಾರೆ , ಆ ನಂತರ ಸ್ವತ್ತನ್ನು ನೋಂದಾಯಿಸಿ ಕೊಡಬೇಕಾಗುತ್ತದೆ ಎಂಬ ಕಾರಣಕ್ಕೆ ಎಲ್ಲರೂ ವಾದಿಯ ಜೊತೆ ಸೇರಿ ನಿಪಿ -13 ನ್ನು ಸೃಷ್ಟಿಸಿದ್ದಾರೆ ಎಂದರೆ ಸರಿಯಲ್ಲ . 1 ರಿಂದ 7 ನೇ ಪ್ರತಿವಾದಿಗಳು ಯಾರು ಸಹಾ ನನ್ನ ಸಮಕ್ಷಮ ಹಾಜರಿರಲಿಲ್ಲ ಎಂದರೆ ಸರಿಯಲ್ಲ . ನನ್ನ ಸಮಕ್ಷಮ 1 ರಿಂದ 7 ನೇ ಪ್ರತಿವಾದಿಗಳು ನಿಪಿ -13 ಕ್ಕೆ ಸಹಿ ಮಾಡಿಲ್ಲ , ವಾದಿಯು ನನಗೆ ಕೆ ಟಿ ನಾರಾಯಣಪ್ಪ ರವರ ಮುಾಲಕ ಪರಿಚಯವಿದ್ದ ಕಾರಣ ನಿಪಿ -13 ನ್ನು ಸೃಷ್ಟಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ .

ನನ್ನ ಕಚೇರಿಯಲ್ಲಿ ವಾದಿ ಮತ್ತು 1 ರಿಂದ 7 ನೇ ಪ್ರತಿವಾದಿಗಳುಹಾಜರಿದ್ದರು . 8 ಲಕ್ಷ ರೂಗಳಿಗೆ ಕ್ರಯದ ಮಾತುಕತೆ ಆಗಿತ್ತು . ವಾದಿಯು 2 ಲಕ್ಷ ಮುಂಗಡ ಹಣ ನೀಡಿದ್ದಾರೆ. 6 ಲಕ್ಷ ರೂಗಳನ್ನು ಕ್ರಯದ ನೋಂದಣಿ ಸಮಯ ನೀಡುವುದಾಗಿ ಒಪ್ಪಿದ್ದರು . 8 ಲಕ್ಷ ರೂಗಳನ್ನು ಎಷ್ಟು ಭಾಗಗಳಾಗಿ ವಿಂಗಡಿಕೊಳ್ಳುವುದಾಗಿ ಅವರು ತಿಳಿಸಿದ್ದರು ಎಂದರೆ ಸಾಕ್ಷಿಯು ಆ ಬಗ್ಗೆ ಮಾತುಕತೆ ನಡೆದಿರಲಿಲ್ಲ ಎಂದು ತಿಳಿಸಿದ್ದಾರೆ . 2 ಲಕ್ಷ ರೂ ಮುಂಗಡ ಹಣವನ್ನು ಜಯಲಕ್ಷ್ಮಮ್ಮ ಪಡೆದುಕೊಂಡರು, ಯಾರು ಯಾರು ಎಷ್ಟು ಹಣ ಹಂಚಿಕೊಂಡರು ಎಂದು ಗೊತ್ತಿಲ್ಲ . ಎಷ್ಟು ದಿನಗಳೊಳಗಾಗಿ ಕ್ರಯ ಪತ್ರ ನೋಂದಾಯಿಸಿಕೊಡುತ್ತೇವೆ ಎಂದು ಪತ್ರದಲ್ಲಿ ನಮೂದಿಸಿಲ್ಲ, ಈ ಖಾತಾ ಮಾಡಿಸಿಕೊಂಡ ನಂತರ ಸ್ವತ್ತನ್ನು ನೋಂದಾಯಿಸಿಕೊಡುವುದಾಗಿ ಪ್ರತಿವಾದಿಗಳು ಹೇಳಿದ್ದರು . ದಾವಾ ಸ್ವತ್ತನ್ನು ಮಾರಾಟ ಮಾಡಬೇಕಾದ ಅನಿವಾರ್ಯತೆ ಏನಿತ್ತು ಎಂದು ವಾದಿಯಾಗಲೀ ಮತ್ತು 1 ರಿಂದ 7 ನೇ ಪ್ರತಿವಾದಿಗಳಾಗಲೀ ನನಗೆ ತಿಳಿಸಿಲ್ಲ . 1 ರಿಂದ 7 ನೇ ಪ್ರತಿವಾದಿಗಳು ದಾವಾ ಸ್ವತ್ತನ್ನು ಮಾರಾಟ ಮಾಡಬೇಕಾದ

ಓ ಎಸ್ ನಂ.89/2018

ಅನಿವಾರ್ಯತೆ ಇರಲಿಲ್ಲ , ವಾದಿಯು ನನಗೆ ಪರಿಚಯವಿದ್ದ ಕಾರಣ ನಿಪಿ -13 ನ್ನು ಅವರ ಅಗತ್ಯಕ್ಕೆ ತಕ್ಕಂತೆ ಸೃಷ್ಟಿಸಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ . ವಾದಿಯ ಮಾತು ಕೇಳಿ ನಿಪಿ -13 ನ್ನು ಸೃಷ್ಟಿಸಿಕೊಟ್ಟು ಈಗ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .